**OS No. 220/2021** **DW-1**

ದಿನಾಂಕ: **18.11.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ವಾದಿ ಪರ ಶ್ರೀ ಬಿ ವಿ ವಕೀಲರಿಂದ

ಎಲ್ಲಾ ಪ್ರತಿವಾದಿಗಳು ನನ್ನ ಸಹೋದರರು. ನನ್ನ ತಂದೆ ಸುಮಾರು 30 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನನ್ನ ತಂದೆ ಹೋಟೇಲ್ ಮತ್ತು ಕೃಷಿ ಉದ್ಯೋಗ ಮಾಡುತ್ತಿದ್ದರು. ನನ್ನ ತಂದೆಗೆ ಸರ್ವೆ ನಂಬರ್ 173 ರಲ್ಲಿ ಜಮೀನು ಇತ್ತು. ಸದರಿ ಸರ್ವೆ ನಂಬರ್ ನಲ್ಲಿ ಎಷ್ಟು ವಿಸ್ತೀರ್ಣದ ಜಮೀನು ಇತ್ತು ಎಂದು ನನಗೆ ನೆನಪಿಲ್ಲ. ನನ್ನ ತಂದೆಯ ಜಿವೀತಾವಧಿಯಲ್ಲಿ ಸದರಿ ಸ್ವತ್ತನ್ನು ವಿಭಾಗ ಮಾಡಿಕೊಟ್ಟಿರುವುದಿಲ್ಲ. ನನ್ನ ತಂದೆಗೆ ಭೂ ನ್ಯಾಯಾ ಮಂಡಳಿಯಿಂದ ಮಂಜೂರಾಗಿರುವ ಸ್ವತ್ತಿನ ಅಳತೆಯಾಗಿರುತ್ತದೆ. ಸದರಿ ಸರ್ವೆ ದಾಖಲೆಗಳನ್ನು ನ್ಯಾಯಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಸರ್ವೆ ನಂಬರ್ 173 ರ ಪಹಣಿ ಪತ್ರವನ್ನು ನೋಡಿರುತ್ತೇನೆ. ಸರ್ವೆ ನಂಬರ್ 173 ರ ಪಹಣಿ ಪತ್ರದಲ್ಲಿ 1 ಎಕರೆ 15 ಗುಂಟೆ ವಿಸ್ತೀರ್ಣ ನಮೂದು ಇರುತ್ತದೆ ಸಾಕ್ಷಿಯು ಮುಂದುವರೆದು ಸರಿಯಾಗಿ ನೆನಪಿಲ್ಲ ಎಂದು ನುಡಿಯುತ್ತಾರೆ.

ನನಗೆ ಸರ್ವೆ ನಂಬರ್ 173/13 ರಲ್ಲಿ ಯಾವುದೇ ಜಮೀನು ಇರುವುದಿಲ್ಲ. ಸರ್ವೆ ನಂಬರ್ 173 ಒಟ್ಟು ಎಷ್ಟು ವಿಸ್ತೀರ್ಣ ಎಂದು ನನಗೆ ಗೊತ್ತಿಲ್ಲ. ನಾನು ಹೇಳುವಂತೆ ನನ್ನ ತಂದೆಗೆ ಮಂಜೂರಾಗಿರುವ ಸರ್ವೆ ನಂಬರ್ 173 ರ ಚೆಕ್ಕುಬಂದಿಯನ್ನು ಹೇಳಲು ಬರುವುದಿಲ್ಲ. ಸರ್ವೆ ನಂಬರ್ 173 ಭೂ ನ್ಯಾಯ ಮಂಡಳಿಯಿಂದ ಅಳತೆಯಾಗಿರುತ್ತದೆ. ಅಳತೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. 5-6 ವರ್ಷಗಳ ಹಿಂದೆ ಸದರಿ ಸರ್ವೆ ನಂಬರ್ ಅಳತೆಯಾಗಿರುತ್ತದೆ. ಸರ್ವೆ ನಂಬರ್ 173 ರಲ್ಲಿ ಒಟ್ಟು ಎಷ್ಟು ಪೋಡುಗಳು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ 173/12 ರಲ್ಲಿ ನಮಗೆ ಯಾವುದೇ ಸ್ವತ್ತು ಇರುವುದಿಲ್ಲ. ಸರ್ವೆ ನಂಬರ್ 173/2 ರಲ್ಲಿ ನಮಗೆ ಯಾವುದಾದರೂ ಜಮೀನು ಇದೆಯಾ ಎಂದರೆ ಸಾಕ್ಷಿಯು ಸರ್ವೆ ನಂಬರ್ 173 ರಲ್ಲಿ ನಮಗೆ 1 ಎಕರೆ 15 ಗುಂಟೆ ಜಮೀನು ಇರುತ್ತದೆ ಆದರೆ ಎಷ್ಟನೇ ಪೋಡು ಎಂದು ನನಗೆ ಈಗ ನೆನಗೆ ನೆನಪಿರುವುದಿಲ್ಲ. ವಾದಿಯ ಗಂಡ ಪುಟ್ಟಪ್ಪ ರವರ ಪರಿಚಯವಿದೆ. ಪುಟ್ಟಪ್ಪ ರವರು ಸಹ ಗೇಣಿ ಜಮೀನು ಸಾಗುವಳಿ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಮ್ಮಂತೆಯೇ ಸರ್ವೆ ನಂಬರ್ 173 ರಲ್ಲಿ ಅವರು ಸಹ

ಗೇಣಿ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ. ವಾದಿಯ ಗಂಡ ಪುಟ್ಟಪ್ಪ ರವರು ಸಾಗುವಳಿ ಮಾಡುತ್ತಿದ್ದ ಜಮೀನಿನ ಮೇಲೆ ನಮಗೆ ಯಾವುದೇ ಹಕ್ಕು ಹಿತಾಶಕ್ತಿ ಇರುವುದಿಲ್ಲ. ವಾದಿಯ ಗಂಡ ಪುಟ್ಟಪ್ಪ ರವರು ಸರ್ವೆ ನಂಬರ್ 173 ರಲ್ಲಿ 15.08 ಗುಂಟೆಗೆ ಸಾಗುವಳಿ ಮಾಡುತ್ತಿದ್ದರು ಎಂದರೆ ಸಾಕ್ಷಿಯು ವಿಸ್ತೀರ್ಣ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಯ ಗಂಡ ಪುಟ್ಟ ನಾಯ್ಕ ರವರು ಮೃತಪಟ್ಟಿರುತ್ತಾರೆ ಎಂದರೆ ಸರಿ. ಅವರು ಮೃತಪಟ್ಟ ನಂತರ ವಾದಿಯು ಸದರಿ ಸ್ವತ್ತನ್ನು ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿ.

ಸರ್ವೆ ನಂಬರ್ 173 ಅಳತೆಯಾಗಿ ಪೋಡುಗಳಾಗಿ ವಿಂಗಡನೆಯಾಗಿದೆಯಾ ಎಂದರೆ ಸಾಕ್ಷಿಯು ನನಗೆ ಸರಿಯಾಗಿ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯ ಗಂಡ ಪುಟ್ಟ ನಾಯ್ಕ ರವರು ಮಾಡುತ್ತಿದ್ದ ಜಮೀನಿನಲ್ಲಿ ಈಗ ಅಡಿಕೆ ಬೆಳೆ ಇದೆ ಎಂದರೆ ಸರಿ. ಸರ್ವೆ ನಂಬರ್ 173 ರ ಪೋಡುಗಳನ್ನು ನಾನು ಯಾವುದೇ ಸಕ್ಷಮ ಪ್ರಾಧಿಕಾರದಲ್ಲಿ ಪ್ರಶ್ನೆ ಮಾಡಿರುವುದಿಲ್ಲ. ವಾದಿಯು ಈ ದಾವೆಯಲ್ಲಿ ಸಲ್ಲಿಸಿರುವ ದಾಖಲೆಗಳನ್ನು ಓದಿ ತಿಳಿದುಕೊಂಡಿರುತ್ತೇನೆ ಆದರೆ ಈಗ ನೆನಪಿಲ್ಲ. ವಾದಿಯ ಗಂಡ ಮತ್ತು ಪ್ರಸ್ತುತ ವಾದಿ ಸಾಗುವಳಿ ಮಾಡುತ್ತಿರುವ ಜಮೀನಿನ ಅಕ್ಕಪಕ್ಕದಲ್ಲಿ ನಮಗೆ ಸೇರಿದ ಜಮೀನು ಇದೆಯಾ ಎಂದರೆ ಸಾಕ್ಷಿಯು ಸದರಿ ಜಮೀನಿನ ಮೇಲ್ಭಾಗದಲ್ಲಿ ನಮಗೆ ಸೇರಿದ ಸರ್ವೆ ನಂಬರ್ 172 ಬರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 173 ಮತ್ತು ಸರ್ವೆ ನಂಬರ್ 172 ಎರಡರ ನಡುವೆ ಬೇಲಿ ಇದೆ, ಸಾಕ್ಷಿಯುವ ಮುಂದುವರೆದು ಸರ್ವೆ ನಂಬರ್ 172 ಅನ್ನು ದರಕಾಸ್ತು ಮಂಜೂರಾಗುವ ಸಂದರ್ಭದಲ್ಲಿ ಅಳತೆ ಮಾಡಿ ಗಡಿಯನ್ನು ಗುರುತಿಸಿರುತ್ತಾರೆ ಹಾಗೂ ನಾವು ನಮ್ಮ ಜಾಗಕ್ಕೆ ಬೇಲಿ ಹಾಕಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 172 ರ ನಕ್ಷೆಯನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ಅವರ ಜಮೀನಿಗೆ ಹೋಗಲು ನನ್ನ ಜಮೀನಿಂದ ಯಾವುದೇ ದಾರಿ ಇರುವುದಿಲ್ಲ, ಆದೇ ರೀತಿ ನನ್ನ ಜಮೀನಿಗೆ ಹೋಗಲು ಅವರ ಜಮೀನಿಂದ ಯಾವುದೇ ದಾರಿ ಇರುವುದಿಲ್ಲ. ನಾನು ಹೇಳುವಂತೆ ನಮಗೆ ಸೇರಿದ ಸರ್ವೆ ನಂಬರ್ 172 ರಲ್ಲಿ ಅಕೇಷಿಯಾ ಗಿಡಗಳನ್ನು ಹಾಕಿರುತ್ತೇವೆ. ಸರ್ವೆ ನಂಬರ್ 172 ರ ಪಹಣಿ ಪತ್ರವನ್ನು ನೋಡಿರುತ್ತೇನೆ. ಸರ್ವೆ ನಂಬರ್ 172 ರಲ್ಲಿ ಒಟ್ಟು 7 ಎಕರೆ 37 ಗುಂಟೆ ಇರುತ್ತದೆ ಎಂದರೆ ಸರಿ. ಸರ್ವೆ ನಂಬರ್ 172 ರಲ್ಲಿ ಕೃಷ್ಣರಾಯ, ದೇವರಾಜ್, ದ್ಯಾವಣ್ಣಗೌಡ, ಚೇತನ್ ಮತ್ತು ಗಣೇಶ್ ರವರಿಗೂ ಸಹ ಜಮೀನು ಇರುತ್ತದ ಎಂದರೆ ಸಾಕ್ಷಿಯು ಮೇಲ್ಭಾಗದಲ್ಲಿ ಹಲವಾರು ಜನರ ಜಮೀನು ಇರುತ್ತದೆ ಯಾರು ಎಂದು ನನಗೆ ಗೊತ್ತಿಲ್ಲ

ಎಂದು ನುಡಿಯುತ್ತಾರೆ. ಮೇಲೆ ತಿಳಿಸಿರುವ ವ್ಯಕ್ತಿಗಳು ನಮ್ಮ ಜಾಗದ ಯಾವುದಕೇ ಚೆಕ್ಕುಬಂದಿಗಳಲ್ಲಿ ಇರುವುದಿಲ್ಲ. ಸರ್ವೆ ನಂಬರ್ 172 ಪೋಡಿಯಾಗಿರುವುದಿಲ್ಲ. ಸಾಕ್ಷಿಯು ಮುಂದುವರೆದು ಒಮ್ಮೆ ಪೋಡಿ ದುರಸ್ತಿಗೆ ಸರ್ವೆಯರ್ ಬಂದಾಗ ವಾದಿಯು ಗಲಾಟೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಗಿದೆ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿಯಿದೆ.

ಪ್ರಧಾನ ವ್ಯವಹಾರ ನ್ಯಾಯಾಧೀಶರು,

ತೀರ್ಥಹಳ್ಳಿ